ಕರ್ನಾಟಕಸರ್ಕಾರ

(ಕಂದಾಯ ಇಲಾಖೆ)

ಉಪತಹಶೀಲ್ದಾರವರ ನ್ಯಾಯಾಲಯ, ನಾಡಕಛೇರಿ ಹೊಸಹಳ್ಳಿ

ಸಂ/ಕಂ/ಹ.ಬ./ನಾಕಹೊ/57/2015-16 ದಿನಾಂಕ:19-09-2016.

| ವಾದಿಗಳು | ಪ್ರತಿವಾದಿಗಳು |
|---|---|
| 1)ಆರ್.ಬಸವರೆಡ್ಡಿ ತಂದೆ ಆರ್.ಹನುಮಂತಪ್ಪ<br>2)ಆರ್.ಗೋಪಾಲರೆಡ್ಡಿ ತಂದೆ ಆರ್.ಹನುಮಂತಪ್ಪ<br>3)ಆರ್.ಹೆಚ್.ಪ್ರಕಾಶ ತಂದೆ ಆರ್.ಹನುಮಂತಪ್ಪ<br>4)ಆರ್.ಜಯರಾಮರೆಡ್ಡಿ ತಂದೆ ಆರ್.ಹನುಮಂತಪ್ಪ<br>ಲೋಕಿಕೆರೆ ಗ್ರಾಮ ಕೂಡ್ಲಿಗಿ ತಾಲೂಕು | ಟಿ.ತಿಪ್ಪಮ್ಮ ಗಂಡ ಲೇಟ್ ಬೋಮ್ಮನಗೌಡ<br>ಲೋಕಿಕೆರೆ ಗ್ರಾಮ<br>ಕೂಡ್ಲಿಗಿ ತಾಲೂಕು |
| ಕೂಡ್ಲಿಗಿ ತಾಲೂಕು ಲೋಕಿಕೆರೆ ಗ್ರಾಮದ ಸನಂ 25/4. ವಿಸ್ತೀರ್ಣ 16-60. ಎಕ್ರೆ ಜಮೀನನ್ನು ಪಾಲು ವಿಭಾಗದ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಲೋಕಿಕೆರೆ ಗ್ರಾಮದ ಸನಂ 25/4. ವಿಸ್ತೀರ್ಣ 16-60. ಎಕ್ರೆ ಜಮೀನನ್ನು ಸದರಿ ಗ್ರಾಮದ ಆರ್.ಹೆಚ್.ಪ್ರಕಾಶ ತಂದೆ ಆರ್.ಹನುಮಂತಪ್ಪ ಇವರು ದಿನಾಂಕ 02-01-2015. ರ ಪಾಲು ವಿಭಾಗದ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಲೋಕಿಕೆರೆ ಇವರು ನಮೂನೆ-21 ನೋಟಿಸನ್ನು ದಿನಾಂಕ 23-05-2015. ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಸದರಿ ಗ್ರಾಮದ ಟಿ.ತಿಪ್ಪಮ್ಮ ಗಂಡ ಲೇಟ್ ಬೋಮ್ಮನಗೌಡ ಇವರು ತಕರಾರು ಅರ್ಜಿ ಸಲ್ಲಿಸಿರುವ ಕಾರಣ ಈ ಪ್ರಕರಣದ ಎಂ.ಆರ್.ನಂಬರ್: 26/2014-15. ದಿನಾಂಕ 24-06-2015. ರಲ್ಲಿ ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 15-09-2015 ರಿಂದ 19-09-2016 ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಹಾಗೂ ಅವರ ಪರ ನ್ಯಾಯಾವಾದಿಗಳು ಮತ್ತು ತಕರಾರುದಾರರು ಹಾಗೂ ಅವರ ಪರ ನ್ಯಾಯಾವಾದಿಗಳು ಹಾಜರಾಗಿರುತ್ತಾರೆ. ಅರ್ಜಿದಾರರ ಪರ ನ್ಯಾಯಾವಾದಿಗಳು ಲೋಕಿಕೆರೆ ಗ್ರಾಮದ ಸನಂ 25/4. ವಿಸ್ತೀರ್ಣ 16-60. ಎಕ್ರೆ ಜಮೀನು ಅರ್ಜಿದಾರರ ತಂದೆಯಾದ ಹನುಮಂತಪ್ಪ ತಂದೆ ಲಕ್ಷ್ಮಪ್ಪ ಇವರು ಸದರಿ ಗ್ರಾಮದ ದಳವಾಯಿ ಭೀಮಪ್ಪ ಮತ್ತು ಬೋಮ್ಮನಗೌಡ ಇವರಿಂದ ದಿನಾಂಕ 29-08-1986 ರ ಡಾಕ್ಯುಮೆಂಟ್ ನಂಬರ್: 738/1986-87 ರ ಪ್ರಕಾರ ಖಂಡಿತ ಕ್ರಯಕ್ಕೆ ಖರೀದಿಸಿ ನೊಂದಣಿ ಮಾಡಿಸಿ ಕೊಂಡು ಸದರಿಯವರು ದಿನಾಂಕ: 02-01-2015 ರಂದು ಪಾಲು ವಿಭಾಗದ ಪತ್ರ ಬರೆಯಿಸಿ ಅದರಂತೆ ಅಳತೆ ಮಾಡಿಸಿ 11ಇ. ನಕ್ಷೆಯನ್ನು ಪಡೆದಿರುತ್ತಾರೆ. ಕಾರಣ ಸದರಿ ಪಾಲು ವಿಭಾಗದ ಪತ್ರ ಹಾಗೂ 11ಇ. ನಕ್ಷೆಯಂತೆ ಅರ್ಜಿದಾರರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಬೇಕೆಂದು ಕೋರಿರುತ್ತಾರೆ. ಹಾಗೂ ಸದರಿ ವಿವಾದಿತ ಸ್ವತ್ತು ಅರ್ಜಿದಾರರ ತಂದೆಯ ಹೆಸರಿನಲ್ಲಿದ್ದು ಪಾಲು ವಿಭಾಗದ ಪತ್ರದನ್ವಯ ಹಕ್ಕು ಬದಲಾವಣೆ ಮಾಡುವಂತೆಯು ಕೋರಿರುತ್ತಾರೆ.

ಪು.ತಿ.ನೊ-2

ವಿಚಾರಣೆಯಲ್ಲಿ ತಕರಾರುದಾರರ ಪರ ನ್ಯಾಯಾವಾದಿಗಳು ಹಾಜರಾಗಿದ್ದು ಸದರಿ ವಿವಾದಿತ ಜಮೀನು ಖರೀದಿ ಪತ್ರವು ಅನಾಮತ್ತಿನಲ್ಲಿ ಇದೆಯೇಂದು ನಮೂದಾಗಿದ್ದರೂ ಹೇಗೆ ಹಕ್ಕು ಬದಲಾವಣೆಯಾಗಿದೆಯೇಂಬುದರ ಬಗ್ಗೆ ಸ್ಪಷ್ಟವಾಗುತ್ತಿಲ್ಲಾ ಮತ್ತು ಸದರಿ ವಿವಾದಿತ ಜಮೀನಿನಲ್ಲಿ ಭೀಮಪ್ಪ ಮತ್ತು ಬೋಮ್ಮನಗೌಡ ಇಬ್ಬರು ಹಕ್ಕುದಾರರಿದ್ದರೂ ಕೇವಲ ಭೀಮಪ್ಪ ಇವರೆ ಸದರಿ ಜಮೀನನ್ನು ಮಾರಾಟ ಮಾಡಿರುವುದಕ್ಕೆ ಆಕ್ಷೇಪಣೆ ವ್ಯಕ್ತಪಡಿಸಿರುತ್ತಾರೆ. ಸದರಿ ಕ್ರಯ ಪತ್ರಗಳನ್ನು ಅಮಾನತ್ತಿನಲ್ಲಿ ಇದ್ದುದರಿಂದ ಅದರನ್ವಯ ವರ್ಗಾವಣೆಯಾಗಿರುವುದು ತಪ್ಪಾಗಿದ್ದು ಎಂದು ಆಕ್ಷೇಪಣೆಯನ್ನು ವ್ಯಕ್ತಪಡಿಸಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನಿನ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರು ಸಲ್ಲಿಸಿದ ದಾಖಲೆ ಮಂಡಿಸಿದ ವಾದ ಮತ್ತು ತಕರಾರುದಾರರು ಸಲ್ಲಿಸಿದ ದಾಖಲೆ ಮತ್ತು ವಿಚಾರಣೆ ವೇಳೆ ಮಂಡಿಸಿದ ವಾದವನ್ನು ಪರಿಶೀಲಿಸಿ ಹಾಗೂ ಉಪನೊಂದಣಾಧಿಕಾರಿಗಳ ಕೂಡ್ಲಿಗಿ ಇವರು ದಿನಾಂಕ 17-09-2016. ರ ಮೂಲಕ ವಿವಾದಿತ ಸ್ವತ್ತು ಅಪಮೌಲ್ಯವಾದ್ದರಿಂದ ಮಾರಾಟ ಅನಾಮತ್ತಿನಲ್ಲಿ ಇಡಲಾಗಿತ್ತು ನಂತರ ದಿನಾಂಕ 18-03-1987 ರಂದು ಸದರಿ ದಸ್ತಾವೇಜನ್ನು ನೊಂದಣಿ ಮಾಡಲಾಗಿದೆಯೇಂದು ವರದಿ ಸಲ್ಲಿಸಿರುತ್ತಾರೆ. ಕಾರಣ ವಿವಾದಿತ ಸ್ವತ್ತು ನೊಂದಣಿಯಂತೆ ಕ್ರಯ ಪತ್ರದ ಮೂಲಕ ಅರ್ಜಿತವಾಗಿರುವುದರಿಂದ ಅರ್ಜಿದಾರರ ಕೋರಿಕೆಯನ್ವಯ ಪಾಲು ವಿಭಾಗದ ಪತ್ರದನ್ವಯ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

**-:ಆದೇಶ:-**

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಲೋಕಿಕೆರೆ ಗ್ರಾಮದ ಸನಂ 25/4. ವಿಸ್ತೀರ್ಣ 16-60. ಎಕ್ರೆ ಜಮೀನನ್ನು ದಿನಾಂಕ 02-01-2015. ರ ಪಾಲು ವಿಭಾಗದ ಪತ್ರ ಹಾಗೂ 11ಇ.ನಕ್ಷೇ ಪ್ರಕಾರ

| ಕ್ರಸಂ | ಹೆಸರು | ಸನಂ | ವಿಸ್ತೀರ್ಣ |
|---|---|---|---|
| 1 | ಆರ್.ಬಸವರೆಡ್ಡಿ ತಂದೆ ಆರ್.ಹನುಮಂತಪ್ಪ | 25/4ಪೈಕಿ. | 6-20. |
| 2 | ಆರ್.ಗೋಪಾಲರೆಡ್ಡಿ ತಂದೆ ಆರ್.ಹನುಮಂತಪ್ಪ | 25/4ಪೈಕಿ. | 3-90. |
| 3 | ಆರ್.ಹೆಚ್.ಪ್ರಕಾಶ ತಂದೆ ಆರ್.ಹನುಮಂತಪ್ಪ | 25/4ಪೈಕಿ. | 6-20. |
| 4 | ಆರ್. ಬಸವರೆಡ್ಡಿ ತಂದೆ ಆರ್.ಹನುಮಂತಪ್ಪ.<br>ಆರ್.ಗೋಪಾಲರೆಡ್ಡಿ ತಂದೆ ಆರ್.ಹನುಮಂತಪ್ಪ<br>ಆರ್.ಜಯರಾಮರೆಡ್ಡಿ ತಂದೆ ಆರ್.ಹನುಮಂತಪ್ಪ<br>ಆರ್.ಹೆಚ್. ಪ್ರಕಾಶ ತಂದೆ ಆರ್.ಹನುಮಂತಪ್ಪ | 25/4ಪೈಕಿ. | 0-30. |

ಈ ಮೇಲಿನಂತೆ ಪಾಲು ವಿಭಾಗದ ಪತ್ರ ಪ್ರಕಾರ ಅರ್ಜಿದಾರರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ. ಹಾಗೂ ಮುದ್ರಾಂಕ ಶುಲ್ಕ ಪಾವತಿಸಲು ಸಹಾ ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 19-09-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪ ತಹಶೀಲ್ದಾರರು
ನಾಡಕಛೇರಿ
ಪು.ತಿ.ನೋ-3.

ಇದರ ಪ್ರತಿಯನ್ನು:

1) ಅರ್ಜಿದಾರರಾದ ಆರ್.ಹೆಚ್.ಪ್ರಕಾಶ ತಂದೆ ಆರ್.ಹನುಮಂತಪ್ಪ, ಆರ್.ಬವಸವರೆಡ್ಡಿ ತಂದೆ ಆರ್.ಹನುಮಂತಪ್ಪ ಹಾಗೂ ಇತರರು ಲೋಕಿಕೆರೆ ಗ್ರಾಮ ಕೂಡ್ಲಿಗಿ ತಾಲೂಕು ಇವರ ಪರ ವಕೀಲರಾದ ಕೆ.ಬಿ.ಸಾವಿತ್ರಿಬಾಯಿ ವಕೀಲರು ಕೂಡ್ಲಿಗಿ ಇವರ ದ್ವಾರ ಕಳುಹಿಸಿ ಕೊಡಲಾಗಿದೆ.
2) ತಕರಾರುದಾರರಾದ ಟಿ.ತಿಪ್ಪಮ್ಮ ಗಂಡ ಲೇಟ್ ಬೋಮ್ಮನಗೌಡ ಲೋಕಿಕೆರೆ ಗ್ರಾಮ ಕೂಡ್ಲಿಗಿ ತಾಲೂಕು ಇವರ ಪರ ವಕೀಲರಾದ ಹೆಚ್.ಜಿ.ಪ್ರಕಾಶ ಪಾಟೀಲ್ ವಕೀಲರು ಕೂಡ್ಲಿಗಿ ಇವರ ದ್ವಾರ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.